

## ಪಟಾಕಿ ಫ್ಯಾಕ್ಟ್ ಶೀಟ್

1. ಪಟಾಕಿ ಎಂಬುದು ವಸ್ತುವಲ್ಲ. ಅದೊಂದು ರಾಸಾಯನಿಕ ಕ್ರಿಯೆ ಎನ್ನುತ್ತಾರೆ ತಜ್ಞರು. ಪಟಾಕಿ ಸಿಡಿಯಲು ಬೇಕಿರುವ ಮೂರು ಮೂಲ ವಸ್ತುಗಳೆಂದರೆ ಇಂಧನ, ರಾಸಾಯನಿಕ ಸಂಯುಕ್ತ ಮತ್ತು ಆಕ್ಸಿಡೈಸರ್. ಇಂಧನದ ಬಂಧವನ್ನು ಒಡೆಯುವ ಆಕ್ಸಿಡೈಸರ್‌ಗಳು ಬೆಂಕಿ ತಾಗಿದೊಡನೆ ಫಟ್ ಎಂದು ಸಿಡಿಯುತ್ತವೆ. ಆಗ ಬಣ್ಣ, ಬೆಳಕು, ಶಬ್ದ, ಚಿತ್ತಾರ ಎಲ್ಲ ಒಟ್ಟಿಗೇ ಮೇಳೈಸುತ್ತವೆ.
2. ಅಮೆರಿಕ ಮತ್ತು ಕೆಲ್ಲಿ ದೇಶಗಳಲ್ಲಿ ಅಧಿಕೃತ ಪರವಾನಿಗೆ ಪಡೆದ ಸಂಸ್ಥೆಗಳು ಮಾತ್ರ ಪಟಾಕಿ ಸುಡಬಹುದು. ತೈವಾನ್‌ನಲ್ಲಿ ಪಟಾಕಿಯನ್ನು ಸಂಪೂರ್ಣ ನಿಷೇಧಿಸಲಾಗಿದೆ. ವಿಯೆಟ್ನಾಂನಲ್ಲಿ ಸರ್ಕಾರದ ಪ್ರತಿನಿಧಿಗಳು ಮಾತ್ರ ಪಟಾಕಿ ಸುಡುತ್ತಾರೆ. ಸ್ವೀಡನ್‌ನಲ್ಲಿ ರಾಕೆಟ್‌ಗಳನ್ನು ಸುಡಲು ಅನುಮತಿ ಇದೆ.
3. ನಮ್ಮ ರಾಜ್ಯದಲ್ಲಿ ಕಬ್ಬಿನ ಗದ್ದೆ, ತೋಟಗಳಿಗೆ ನುಗ್ಗುವ ಕಾಡಾನೆಗಳನ್ನು ಬೆದರಿಸಲು ಪಟಾಕಿ ಸುಡುವ ಪರಿಪಾಠವಿದೆ. ಇತ್ತೀಚೆಗೆ ಪಟಾಕಿ ಸದ್ದಿಗೆ ಹೊಂದಿಕೊಂಡಿರುವ ಆನೆಗಳು ತಾವಿರುವ ಜಾಗದಿಂದ ಕದಲುವುದಿಲ್ಲ ಎಂಬುದು ರೈತರ ಅಂಬೋಣ.
4. ಪಟಾಕಿಯ ಸದ್ದಿನಿಂದ ಪ್ರಾಣಿ–ಪಕ್ಷಿಗಳು ಕಿರಿಕಿರಿ ಅನುಭವಿಸುತ್ತವೆ ಎಂಬುದು ಹಲವು ಅಧ್ಯಯನಗಳಲ್ಲಿ ಸಾಬೀತಾಗಿದೆ. ಮನುಷ್ಯರಿಗಿಂತ ಹೆಚ್ಚು ಶಬ್ದಗ್ರಹಣ ಶಕ್ತಿ ಪ್ರಾಣಿಗಳಿಗಿರುತ್ತದೆ. ನಾಯಿಗಳು 60 ಸಾವಿರ ಹರ್ಟ್ಜ್ ಕಂಪನಾಂಕದ ಶಬ್ದಗಳನ್ನು ಸಹಿಸಿಕೊಳ್ಳುತ್ತವೆಯಾದರೂ ದೀಪಾವಳಿಯ ದಿನ ಸ್ಟೇರ್‌ಕೇಸ್, ಕಾರ್ಪೆಟ್, ವಾರ್ಡ್‌ರೋಬ್‌ನಲ್ಲಿ ರಕ್ಷಣೆ ಪಡೆದುಕೊಳ್ಳುತ್ತವೆ. ಮಂಚದ ಕೆಳಗೆ ಅವಿತುಕೊಂಡು ಭಯದಿಂದ ನಡುಗುತ್ತವೆ. ಸರಿಯಾಗಿ ಊಟ ಮಾಡದೆ, ವಿಚಿತ್ರವಾಗಿ ವರ್ತಿಸಿ ಸಾಕುವವರ ವಿರುದ್ಧವೇ ತಿರುಗಿ ಬಿದ್ದ ಪ್ರಸಂಗಗಳಿವೆ.
5. ಜನ ವಾಸಮಾಡುವ ಸ್ಥಳಗಳಲ್ಲಿ ಶಬ್ದದ ಪ್ರಮಾಣ 45ರಿಂದ 50 ಡೆಸಿಬಲ್ ಇರುತ್ತದೆ. ಪಟಾಕಿ ಸಿಡಿದಾಗ 100 ಡೆಸಿಬಲ್‌ಗಿಂತ ಹೆಚ್ಚು ಶಬ್ದ ಮಾಡುತ್ತವೆ.
6. ಮಹಾರಾಷ್ಟ್ರದ ನಾಗಪುರದಲ್ಲಿ 20 ಸಾವಿರ ಜನ ಪಟಾಕಿ ಉದ್ಯಮದಲ್ಲಿ ಕೆಲಸ ಮಾಡುತ್ತಿದ್ದಾರೆ.
7. ವಾಯುಮಾಲಿನ್ಯದಿಂದ ಪ್ರತಿವರ್ಷ ನಮ್ಮಲ್ಲಿ 16 ಲಕ್ಷಕ್ಕೂ ಹೆಚ್ಚು ಜನ ಸಾವನ್ನಪ್ಪುತ್ತಿದ್ದಾರೆ.
8. ಬಜಾಜ್ ಫೈನಾನ್ಸ್ ಸರ್ವೀಸ್ ಕಂಪನಿ ಪಟಾಕಿ ಇನ್ಶೂರೆನ್ಸ್ ನೀಡುತ್ತದೆ. ಅಂದರೆ ಹಬ್ಬದ ಆಚರಣೆಯ ವೇಳೆ ಪಟಾಕಿ ಸಿಡಿಸುವಾಗ ಆಗುವ ಗಾಯ, ಅಪಘಾತ, ಅಂಗವೈಕಲ್ಯಗಳ ಚಿಕಿತ್ಸೆಗೆ ಬಜಾಜ್ ಫಿನ್‌ಸರ್ವ್ ಸಂಸ್ಥೆ 'ಫೈರ್ ಕ್ರಾಕರ್ ಇನ್ಶೂರೆನ್ಸ್' ಯೋಜನೆ ಶುರುಮಾಡಿದೆ. ಪಟಾಕಿ ಸಿಡಿಸುವಾಗ ಸಂಭವಿಸುವ ಅಪಘಾತದಿಂದ ಆಸ್ಪತ್ರೆ ಸೇರಿದಾಗ ಚಿಕಿತ್ಸೆಗೆ ತಗಲುವ ವೆಚ್ಚಕ್ಕೆ 2 ಲಕ್ಷ ರೂಪಾಯಿವರೆಗೆ ಕವರೇಜ್ ಪಡೆಯಬಹುದು.
9. ರಾಕೆಟ್‌ಗಳು ಸಿಡಿದು ಕೆಳಗೆ ಬೀಳುವಾಗ, ಮೇಲೆ ಹೋಗುವಾಗ ಪಕ್ಷಿಗಳಿಗೆ ಹಾನಿಯಾದದ್ದೂ ಇದೆ. ಪಟಾಕಿಯ ಜೋರು ಸದ್ದಿಗೆ ಬೆಚ್ಚಿ ಬೀಳುವ ಪಕ್ಷಿಗಳು ರಾಸಾಯನಿಕ ಹೊಗೆಯಿಂದ ಉಸಿರುಗಟ್ಟಿ ಗೂಡಿನಲ್ಲೇ ಸಾಯುತ್ತವೆ. ದೀಪಾವಳಿ ಹಬ್ಬದಂದು ಹಾರಿಸುವ ಗಾಳಿಪಟದ ಮಾಂಜಾದಾರ ಅನೇಕ ಹಕ್ಕಿಗಳ ಪಾಲಿಗೆ ಉರುಳಾಗುತ್ತದೆ.
10. ಭಾರತ, ಶ್ರೀಲಂಕಾ, ಮಲೇಷ್ಯಾ, ಫಿಜಿ, ಮ್ಯಾನ್ಮಾರ್, ನೇಪಾಳ, ಸಿಂಗಪೂರಗಳಲ್ಲಿ ದೀಪಾವಳಿ ರಾಷ್ಟ್ರೀಯ ಹಬ್ಬಕ್ಕೆ ಸಮ.



ದೀಪಾವಳಿಯ ಭೂಚಕ್ರ
ಪಟಾಕಿಯಂತೆ ಕಾಣುವ ಹೆಲಿಟ್ರೆಪಿಸ್
ಮಾಸಿ ಎಂಬ ಜೆಲ್ಲಿ ಫಿಶ್

## ಬುಮ್ರಾಗೆ ಬೌನ್ಸರ್

ಕಳೆದ ದೀಪಾವಳಿಯ ಸಮಯದಲ್ಲಿ 'ಈ ಸಲದ ದೀಪಾವಳಿಗೆ ಪಟಾಕಿ ಬೇಡ' ಎಂಬ ಪರಿಸರಸ್ನೇಹಿ ಹೇಳಿಕೆ ನೀಡಿದ್ದ ಭಾರತ ತಂಡದ ವೇಗದ ಬೌಲರ್ ಜಸ್‌ಪ್ರೀತ್ ಬುಮ್ರಾ, ಪರಿಸರ ಪ್ರಿಯರಿಂದ ಶಹಭಾಸ್‌ಗಿರಿ ಪಡೆದಿದ್ದರು. ಆದರದು ಬಹಳ ದಿನ ಉಳಿಯಲಿಲ್ಲ. ಕೆಲವು ತಿಂಗಳುಗಳ ಹಿಂದಷ್ಟೇ ಮದುವೆಯಾದ ಬುಮ್ರಾ ತಮ್ಮ ಮದುವೆಯ ಎರಡು ಫೋಟೋಗಳನ್ನು ಟ್ವಿಟರ್ ಅಕೌಂಟ್‌ನಲ್ಲಿ ಪೋಸ್ಟ್ ಮಾಡಿದ್ದರು. ದಂಪತಿಗಳು ಸಂತಸದಿಂದ ಹೆಜ್ಜೆ ಹಾಕುತ್ತಿರುವ ಆ ಚಿತ್ರದಲ್ಲಿ ಅವರ ಎರಡೂ ಬದಿಗಳಲ್ಲಿ ಸಾಲುಗಟ್ಟಿ ನಿಂತಿರುವ ಗೆಳೆಯರು, ಸಂಬಂಧಿಕರು ಸುರುಸುರು ಬತ್ತಿಗಳನ್ನು ಹಚ್ಚಿ ಮದುಮಕ್ಕಳನ್ನು ಸ್ವಾಗತಿಸಿದ್ದರು. ಇದನ್ನು ನೋಡಿದ ಅಭಿಮಾನಿಗಳು, 'ಹೇಳುವುದೊಂದು, ಮಾಡುವುದೊಂದು' ಎಂದು ಟೀಕಿಸಿದ್ದರು. 'ನಿಮ್ಮ ಪಟಾಕಿಯಲ್ಲಿ ಆಕ್ಸಿಜನ್ ಇದೆಯೆ? ಎಲ್ಲಿ ಸಿಗುತ್ತದೆ ಹೇಳಿ ನಾವೂ ಕೊಳ್ಳುತ್ತೇವೆ' ಎಂದು ಟ್ರೋಲ್ ಮಾಡಿದ್ದರು.

ಬರುತ್ತಿತ್ತು, ಈಗ ಅವರನ್ನು ಹುಡುಕಬೇಕಾದ ಪರಿಸ್ಥಿತಿ ಇದೆ' ಎನ್ನುವುದು ಒಕ್ಕೂಟದ ಅಳಲು.

ಪ್ರತಿ ವರ್ಷ ಬೆಂಗಳೂರು ಒಂದರಲ್ಲೇ ಸುಮಾರು 50 ಕೋಟಿ ರೂಪಾಯಿ ಮೌಲ್ಯದ ಪಟಾಕಿ ಮಾರಾಟವಾಗುತ್ತಿತ್ತು. ಅದೆಲ್ಲ ಗತವೈಭವ ಎನ್ನುತ್ತಾರೆ ವ್ಯಾಪಾರಿಗಳು. ಅಂದಹಾಗೆ, ಕಳೆದ ವರ್ಷ 'ಹಸಿರು ಪಟಾಕಿ' ಎಂದು ಮಾರಾಟವಾಗಿದ್ದ 30 ಬಗೆಯ ಪಟಾಕಿಗಳ ಪೈಕಿ 29ರಲ್ಲಿ ಅಪಾಯಕಾರಿ ಕೆಮಿಕಲ್‌ಗಳಿದ್ದುದನ್ನು ಮಹಾರಾಷ್ಟ್ರದ 'ಆವಾಸ್ ಫೌಂಡೇಶನ್' ಪತ್ತೆ ಹಚ್ಚಿತ್ತು.

### ಬಣ್ಣದ ಹಬ್ಬಕ್ಕೆ ಬಗೆ ಬಗೆ ಪಟಾಕಿ

ಹಿಂದೆಲ್ಲಾ ಹೂವಿನ ಕುಂಡ, ಭೂ ಚಕ್ರ, ವಿಷ್ಣು ಚಕ್ರ, ಮತಾಪು, ಹಾವಿನ ಗುಳಿಗೆ, ಬಣ್ಣದ ಕಡ್ಡಿ, ಹಂಡ್ರೆಡ್ ವಾಲಾ, ಥೌಸಂಡ್‌ವಾಲಾ, ಲಕ್ಷ್ಮೀ ಬಾಂಬ್, ವರ್‌ಗನ್, ಥಳಥಳಿಸುವ ಪಟಾಕಿಗಳು (Sparklers), ಲಕ್ಷ್ಮೀ ಪಟಾಕಿ, ಬಾಂಬ್‌ಗಳು, ಚಿನಕುರಳಿ, ನಕ್ಷತ್ರಕಡ್ಡಿ, ಸರಪಟಾಕಿ, ಸಿಡಿಮದ್ದು, ರಾಕೆಟ್ಟು, ಸುರುಸುರು ಬತ್ತಿ, ಆನೆ ಪಟಾಕಿ ಮುಂತಾದವುಗಳನ್ನು ಜನ ಮುಗಿಬಿದ್ದು ಕೊಳ್ಳುತ್ತಿದ್ದರು. ಕಾಲಕ್ಕೆ ತಕ್ಕಂತೆ ಪಟಾಕಿ ಟ್ರೆಂಡ್ ಕೂಡಾ ಬದಲಾಗಿದೆ. ಆಕಾಶದಲ್ಲಿ ಹೂಮಳೆ ಸುರಿಸುವ, ಡಾನ್ಸ್ ಮಾಡುವ, ಹಕ್ಕಿಗಳ ಕಲರವದಂತೆ ಶಿಳ್ಳೆ ಹಾಕುವ, ಒಂದು ಸ್ಫೋಟದ ನಂತರ ಅನೇಕ ಬಾರಿ ಸಿಡಿಯುತ್ತ ಬಗೆಬಗೆ ಬಣ್ಣದ ಹೂಮಳೆ ಸುರಿಸುವ ಸ್ಪಾರ್ಕ್ಲರ್‌ಗಳಿಗೆ ಈಗ ಭಾರೀ ಬೇಡಿಕೆ. ದಿ ಸೆವೆನ್ ವಂಡರ್ಸ್, ರಾಕೆಟ್